ನಿ-72
ಶ್ರೀ-112

# ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಘೋಷಿಸಿರುವ ಅಂತರ್ ನದಿಗಳ ಜೋಡಣೆಯ ಯೋಜನೆಯಿಂದ ರಾಜ್ಯದ ಮೇಲೆ ಉಂಟಾಗಬಹುದಾದ ಸಾಧಕ-ಬಾಧಕ ಪರಿಣಾಮಗಳ ಬಗ್ಗೆ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶ್ರೀಕಂಠೇಗೌಡ ಇವರು ನಿಯಮ-72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ

## ಉತ್ತರ

ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ ಹಾಗೂ ಕೇಂದ್ರ ಜಲ ಆಯೋಗವು ರಾಷ್ಟ್ರೀಯ ದೃಷ್ಟಿಕೋನ ಯೋಜನೆ (National Perspective Plan) ಅಡಿಯಲ್ಲಿ ಪೆನಿನ್ಸುಲಾರ್ ನದಿ ಅಭಿವೃದ್ಧಿ ಯೋಜನೆಯ ಭಾಗವನ್ನು 1980ರಲ್ಲಿ ರೂಪಿಸಿದೆ. ಪೆನಿನ್ಸುಲಾರ್ ನದಿ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಮಹಾನದಿ-ಗೋದಾವರಿ-ಕೃಷ್ಣಾ-ಪೆನ್ನಾರ್-ಕಾವೇರಿ-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಹೆಚ್ಚುವರಿ ನೀರಿನ ಪ್ರಮಾಣವನ್ನು 1300 ಟಿಎಂಸಿ ಎಂದು ಅಂದಾಜಿಸಿ, ಕರ್ನಾಟಕ ರಾಜ್ಯಕ್ಕೆ 283 ಟಿಎಂಸಿಯನ್ನು ಹಂಚಿಕೆ ಮಾಡಿತ್ತು (ಕೃಷ್ಣಾ ಕಣಿವೆಯಲ್ಲಿ 196 ಟಿಎಂಸಿ ಮತ್ತು ಕಾವೇರಿ ಕಣಿವೆಯಲ್ಲಿ 87 ಟಿಎಂಸಿ).

2000ನೇ ಇಸವಿಯಲ್ಲಿ ಪಿಆರ್‌ಡಿ ಯೋಜನೆಯಡಿಯಲ್ಲಿನ ಹೆಚ್ಚುವರಿ ನೀರಿನ ಲಭ್ಯತೆಯನ್ನು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಪುನರ್ ವಿಮರ್ಶಿಸಿ, ಹೆಚ್ಚುವರಿ ನೀರಿನ ಪ್ರಮಾಣವು 925 ಟಿಎಂಸಿ ಎಂದು ಅಂದಾಜಿಸಿ ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಮಾಡಲಾಗಿದ್ದ 263 ಟಿಎಂಸಿಯನ್ನು ಆಲಮಟ್ಟಿ-ಪೆನ್ನಾರ್ ಜೋಡಣೆಯ ಲಾಭವೂ ಸೇರಿದಂತೆ 164 ಟಿಎಂಸಿಗೆ ಕಡಿತಗೊಳಿಸಿತು. (ಕೃಷ್ಣಾ ಕಣಿವೆಯಲ್ಲಿ 107 ಟಿಎಂಸಿ ಮತ್ತು ಕಾವೇರಿ ಕಣಿವೆಯಲ್ಲಿ 57 ಟಿಎಂಸಿ).

ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು 2010ರಲ್ಲಿ ಹೆಚ್ಚುವರಿ ನೀರನ ಪ್ರಮಾಣವನ್ನು ಪುನಃ ವಿಮರ್ಶಿಸಿ 718 ಟಿಎಂಸಿ ಲಭ್ಯವಿರುವುದೆಂದು ಅಂದಾಜಿಸಿ ಸದರಿ ಪ್ರಸ್ತಾವನೆಯಲ್ಲಿ ಕರ್ನಾಟಕದ ಪಾಲಿನ ಭಾಗವನ್ನು ಕೃಷ್ಣಾ ಮತ್ತು ಕಾವೇರಿ ಕಣಿವೆ ಎರಡರಲ್ಲಿಯೂ ಸಂಪೂರ್ಣವಾಗಿ ಕೈಬಿಡಲಾಗಿತ್ತು.

ಕರ್ನಾಟಕ ಸರ್ಕಾರವು ದಿನಾಂಕ 03.10.2010ರಂದು ಮಾನ್ಯ ಕೇಂದ್ರ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಕರ್ನಾಟಕ ರಾಜ್ಯಕ್ಕೆ ಹಂಚಿಕೆಯಾಗಿದ್ದ ಪಾಲನ್ನು ಹಿಂಪಡೆದಿರುವುದನ್ನು ವಿರೋಧಿಸಿ ಹಾಗೂ ಬರ ಪೀಡಿತ ಪ್ರದೇಶಗಳು, ಡಿ.ಪಿ.ಎ.ಪಿ. ಮತ್ತು ಡಿ.ಡಿ.ಪಿ. ಪ್ರದೇಶಗಳು ಇತರೇ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚಾಗಿರುತ್ತದೆಂದು ತಿಳಿಸಿ, ಕರ್ನಾಟಕ ರಾಜ್ಯಕ್ಕೆ ದೊರಕಬೇಕಾದ ಪಾಲನ್ನು ಪುನರ್ ನಿಗದಿಪಡಿಸಬೇಕೆಂದು ಕೋರಲಾಗಿದೆ.

ಸದರಿ ವಿಷಯದ ಬಗ್ಗೆ ರಾಜ್ಯದ ಆಕ್ಷೇಪಣೆಯನ್ನು ಕೇಂದ್ರ ಸರ್ಕಾರಕ್ಕೆ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಗೆ 2010ನೇ ಸಾಲಿನಿಂದ ರಾಜ್ಯ ಸರ್ಕಾರದಿಂದ ಬರೆದಿರುವ ಹಲವಾರು ಪತ್ರಗಳಲ್ಲಿ ತಿಳಿಸಲಾಗಿದೆ. ಅಲ್ಲದೇ, ನದಿ ಜೋಡಣೆ ವಿಶೇಷ ಸಮಿತಿಯ ಸಭೆಗಳಲ್ಲಿ ಮತ್ತು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಸಭೆಗಳಲ್ಲಿ ಈ ವಿಷಯದ ಕುರಿತು ರಾಜ್ಯಕ್ಕೆ ಲಭ್ಯವಾಗಬೇಕಾಗಿರುವ ನ್ಯಾಯಸಮ್ಮತ ಪಾಲನ್ನು (rightful share) ನಿರ್ಧರಿಸುವಂತೆ ಒತ್ತಾಯಿಸಲಾಗುತ್ತಿದೆ.

ಕೇಂದ್ರ ಜಲ ಸಂಪನ್ಮೂಲ ಸಚಿವಾಲಯವು ದಿನಾಂಕ:13.10.2015ರ ಪತ್ರದಲ್ಲಿ ಮಹಾನದಿ ಹಾಗೂ ಗೋದಾವರಿ ನದಿ ಕಣಿವೆಗಳ water balance ವರದಿಗಳನ್ನು ಪುನರ್ ವಿಮರ್ಷೆ ಮಾಡುತ್ತಿದ್ದು, ಪುನ ವಿಮರ್ಷಿತ ವರದಿಗಳು ಪೂರ್ಣಗೊಂಡ ನಂತರ Sharing of additional water of Mahanadi and Godavari amongst States including Karnataka will be decided keeping in view the provisions of existing Tribunal awards of Godavari and Krishna basins. MoWR has also informed that for any unresolved issues/concerns Karnataka can approach Central Government under provision of Act, 1956 ಎಂದು ತಿಳಿಸಿದೆ.

ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಸಿದ್ದಪಡಿಸಿರುವ ಗೋದಾವರಿ-ಕಾವೇರಿ ನದಿ ಜೋಡಣೆ ಯೋಜನೆಯ (ಇಂಚಂಪಲ್ಲಿ/ಜನಂಪೇಟ/ಕಾವೇರಿ (Grand Anicut) ವಿವರವಾದ ಯೋಜನಾ ವರದಿಯಲ್ಲಿ, ಗೋದಾವರಿ ಕಣಿವೆಯ 247 ಟಿಎಂಸಿ ಹೆಚ್ಚುವರಿ ನೀರಿನ ಪ್ರಮಾಣವನ್ನು ಕೃಷ್ಣಾ, ಪೆನ್ನಾರ್ ಹಾಗೂ ಕಾವೇರಿ ಕಣಿವೆಗೆ ತಿರುಗಿಸಲು ಪ್ರಸ್ತಾಪಿಸಲಾಗಿದ್ದು, ಸದರಿ ವರದಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಯಾವುದೇ ನೀರನ್ನು ಹಂಚಿಕೆ ಇರುವುದಿಲ್ಲ.

ನದಿ ಕಣಿವೆಗಳಿಗೆ Augment ಮಾಡಲಾಗುವ ನೀರಿನ ಪ್ರಮಾಣವನ್ನು ಪಾಲು ಮಾಡಿಕೊಳ್ಳುವ ವಿಷಯದ ಬಗ್ಗೆ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ ಮತ್ತು ಗೋದಾವರಿ ಜಲ ವಿವಾದ ನ್ಯಾಯಾಧಿಕರಣ ತೀರ್ಪಿನಲ್ಲಿ ಕಾರ್ಯವಿಧಾನಗಳನ್ನು ತಿಳಿಸಲಾಗಿದೆ (ಗೋದಾವರಿ ತೀರ್ಪಿನ ಕ್ಲಾಸ್ V(C) & (E) ಮತ್ತು ಬಜಾವತ್ ತೀರ್ಪಿನ ಕ್ಲಾಸ್ XIV(B).

ನದಿ ಜೋಡಣೆ ಯೋಜನೆಗಳಲ್ಲಿ ರಾಜ್ಯದ ನ್ಯಾಯಸಮ್ಮತ ಪಾಲನ್ನು ನಿರ್ಧರಿಸುವಂತೆ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯ/ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಗೆ ನಿರ್ದೇಶನ ನೀಡಲು ಮಾನ್ಯ ಮುಖ್ಯ ಮಂತ್ರಿಗಳು 12.10.2019 ರಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಪತ್ರಕ್ಕೆ ಪ್ರತಿಕ್ರಿಯಿಸುತ್ತಾ, ಕೇಂದ್ರ ಜಲ ಶಕ್ತಿ ಸಚಿವರು 20.12.2019ರ ಪತ್ರದಲ್ಲಿ ಹೀಗೆಂದು ಉತ್ತರಿಸಿರುತ್ತಾರೆ:

> *"Once the DPR is finalized, the quantum of water that can be transferred to Krishna and Cauvery basins will be known and the issue of sharing the water amongst the co-basin States will be decided in consultation with the States."*

ಮುಂದುವರೆದು, ನೀರಿನ ಬಳಕೆಯ ಉದ್ದೇಶಗಳನ್ನು ಸದರಿ ನದಿ ಜೋಡಣೆಯ ಕೊಳ್ಳದ ಎಲ್ಲಾ ರಾಜ್ಯಗಳೊಂದಿಗೆ ಸಮಾಲೋಚಿಸಿ, ರಾಜ್ಯಗಳ ಪಾಲುಗಳನ್ನು ಒಮ್ಮತದೊಂದಿಗೆ ತೀರ್ಮಾನಿಸುವ ವರೆಗೆ ಗೋದಾವರಿ-ಕಾವೇರಿ ಲಿಂಕ್ ಯೋಜನೆಯ ಡಿ.ಪಿ.ಆರ್.ಅನ್ನು ಅಂತಿಮಗೊಳಿಸಬಾರದೆಂದು NWDAಗೆ ಸೂಚಿಸುವಂತೆ ಜಲ ಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿ, MoWRಗೆ ದಿನಾಂಕ 08.06.2021ರ ಪತ್ರದಲ್ಲಿ ಕೋರಿರುತ್ತಾರೆ.

ಇದೇ ವಿಷಯದ ಕುರಿತಂತೆ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ದಿನಾಂಕ 02.12.2021 ರ ಪತ್ರದಲ್ಲಿ ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿಗಳಿಗೆ "... it is urged that, the rightful share of the State of Karnataka in the divertible water under Godavari-Cauvery link is

to be addressed on the basis of principle of Equality & Equity before finalizing the DPR of Godavari-Cauvery Link project under ILR schemes." ಎಂದು ಕೋರಲಾಗಿರುತ್ತದೆ.

ದಿನಾಂಕ:05.02.2022ರಂದು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಜಲ ಶಕ್ತಿ ಸಚಿವರಿಗೆ ಬರೆದಿರುವ ಪತ್ರದಲ್ಲಿ "... the State of Karnataka requests to provide its due share in the diverted water. .... to direct the concerned authorities in MoWR/NWDA to provide the rightful share of the State of Karnataka from the Link Project." ಎಂದು ಕೋರಲಾಗಿರುತ್ತದೆ.

ಕೇಂದ್ರ ಜಲ ಶಕ್ತಿ ಸಚಿವಾಲಯ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ಗೋದಾವರಿ-ಕಾವೇರಿ ಜೋಡಣೆ ಯೋಜನೆ ಕುರಿತು ಸಂಬಂಧಿಸಿದ ಕಣಿವೆ ರಾಜ್ಯಗಳ ಒಮ್ಮತ ಮೂಡಿಸಲು ಈವರೆಗೂ ಮೂರು ಸಭೆಗಳನ್ನು ನಡೆಸಿರುತ್ತದೆ. ರಾಜ್ಯ ಸರ್ಕಾರವು ಎಲ್ಲಾ ಸಭೆಗಳಲ್ಲಿ ಭಾಗವಹಿಸಿದ್ದು, ಸದರಿ ಯೋಜನೆಯ DPRಅನ್ನು ಅಂತಿಮಗೊಳಿಸುವ ಮೊದಲು ಕೃಷ್ಣಾ-ಪೆನ್ನಾರ್-ಕಾವೇರಿ ಕಣಿವೆಗಳಿಗೆ ತಿರುಗಿಸಲಾಗುತ್ತಿರುವ ಗೋದಾವರಿ ಕಣಿವೆಯ ಹೆಚ್ಚುವರಿ ನೀರಿನ ಪ್ರಮಾಣದಲ್ಲಿ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತ ಪಾಲನ್ನು ನಿರ್ಧರಿಸುವಂತೆ ಒತ್ತಾಯಿಸುತ್ತಿದೆ.

ಕೇಂದ್ರ ಸರ್ಕಾರವು ಕೈಗೊಳ್ಳುತ್ತಿರುವ ನದಿ ಜೋಡಣೆ ಯೋಜನೆಗಳಿಂದ ರಾಜ್ಯಕ್ಕೆ ಲಭ್ಯವಾಗಬೇಕಾಗಿರುವ ನ್ಯಾಯಸಮ್ಮತ ಪಾಲನ್ನು ಪಡೆಯಲು ಸರ್ಕಾರವು ಬದ್ಧವಾಗಿದೆ.

29/3

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು